**<u>ಸಾಕ್ಷಿಯನ್ನು ದಿನಾಂಕ 07-01-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿಯರ ಪರ ಶ್ರೀ ಹೆಚ್.ಬಿ.ಎಸ್ ವಕೀಲರಿಂದಃ</u>**

1. ನಾನು ಪಿ.ಯು.ಸಿ ಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಈ ದಾವೆಯನ್ನು ದಾಖಲಿಸುವ ಸಲುವಾಗಿ ನಮ್ಮ ವಕೀಲರಿಗೆ ನನ್ನ ತಾಯಿ ಮಾಹಿತಿ ಕೊಟ್ಟಿದ್ದಾರೆ. ನನ್ನ ತಾಯಿ ನಾಗತಿಬೆಲಗಳು ಗ್ರಾಮದಲ್ಲಿ ವಾಸವಿದ್ದಾರೆ. ಅವರಿಗೆ ಆರೋಗ್ಯ ಸರಿಯಿಲ್ಲ. ಆ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ನ್ಯಾಯಾಲಯಕ್ಕೆ ಏನೇನು ದಾಖಲೆ ಕೊಟ್ಟಿದ್ದೇನೆ ಎಂದು ನನಗೆ ಗೊತ್ತಿದೆ. ನ್ಯಾಯಾಲಯಕ್ಕೆ ಹಾಜರುಪಡಿಸುವ ಮೊದಲು ನಿ.ಪಿ.–1 ರಿಂದ 14 ರ ದಾಖಲೆಗಳು ನನ್ನ ಅಜ್ಜನ ಬಳಿ ಇತ್ತು. ನನ್ನ ಅಜ್ಜ ನಂಜುಂಡಪ್ಪ 2000 ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ. ನಿ.ಪಿ.–1 ರಿಂದ 14 ರ ದಾಖಲೆಗಳು ನನ್ನ ಅಜ್ಜನ ಬಳಿ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಅನಾರೋಗ್ಯ ಇದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರಬರದಂತೆ ಎಂಬ ಕಾರಣಕ್ಕೆ ಆಕೆಯನ್ನು ನ್ಯಾಯಾಲಯಕ್ಕೆ ಬರದಂತೆ ತಡೆದಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.–15 ರ ದಾಖಲೆಯನ್ನು 2021 ರಲ್ಲಿ ನನ್ನ ತಾಯಿಯನ್ನು ನ್ಯಾಯಾಲಯದ ಆವರಣಕ್ಕೆ ಕರೆಸಿ ಬರೆಸಿಕೊಳ್ಳಲಾಗಿದೆ ಎಂದರೆ ಸರಿ.

2. ನನ್ನ ಅಜ್ಜ ನಂಜುಂಡಪ್ಪನಿಗೆ 5 ಜನ ಮಕ್ಕಳು. ನನ್ನ ಅಜ್ಜನಿಗೆ 7 ಜನ ಮಕ್ಕಳು ಎಂದರೆ ಸಾಕ್ಷಿ ಇಬ್ಬರು ತೀರಿಕೊಂಡಿದ್ದಾರೆ ಎನ್ನುತ್ತಾರೆ. ತೀರಿಕೊಂಡವರ ಹೆಸರು ಬಸವರಾಜಪ್ಪ ಮತ್ತು ಜಯಮ್ಮ. ನನ್ನ ಅಜ್ಜ ಕೃಷಿ ಕೆಲಸ ಮಾಡುತ್ತಿದ್ದರು. ನನ್ನ ಮುತ್ತಜ್ಜನ ಹೆಸರು ದೊಡ್ಡ ನಂಜಪ್ಪ. ನನ್ನ ಮುತ್ತಜ್ಜನಿಗೆ ನನ್ನ ಅಜ್ಜ ಒಬ್ಬನೇ ಗಂಡು ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದರು. ಸದರಿ ಇಬ್ಬರು ಹೆಣ್ಣು ಮಕ್ಕಳು ಈಗ ಮೃತಪಟ್ಟಿದ್ದಾರೆ. ಅವರ ಪೈಕಿ ಒಬ್ಬರ ಹೆಸರು ಬಸಮ್ಮ ಮತ್ತೊಬ್ಬರ ಹೆಸರು ನೆನಪಿಲ್ಲ. ಅವರಿಬ್ಬರಿಗೂ ಮದುವೆಯಾಗಿತ್ತು ಮತ್ತು ಅವರ ಮಕ್ಕಳು ಈಗಲೂ ಬದುಕಿದ್ದಾರೆ. ನನ್ನ ಅಜ್ಜನ ಸಹೋದರಿಯರು ಯಾವ ಊರಿನಲ್ಲಿ ವಾಸವಿದ್ದರು ಎಂದು ಈಗ ನೆನಪಾಗುತ್ತಿಲ್ಲ.

3. ನನ್ನ ಅಜ್ಜಿಯ ಹೆಸರು ಬಸಮ್ಮ. ನನ್ನ ಅಜ್ಜ ನಾಗತಿಬೆಳಗಲು ಗ್ರಾಮದ ಖಾಯಂ ವಾಸಿ ಎಂದರೆ ಸರಿ. ಅವರ 7 ಜನ ಮಕ್ಕಳು ಅದೇ ಗ್ರಾಮದಲ್ಲಿ ಜನಿಸಿದ್ದರು ಮತ್ತು ಎಲ್ಲರು ಒಟ್ಟಿಗೆ ಇದ್ದರು ಎಂದರೆ ಸರಿ. ನನ್ನ ಅಜ್ಜನಿಗೆ ಏನೇನು ಆಸ್ತಿ ಇತ್ತು ನನಗೆ ಮಾಹಿತಿ ಇದೆ. ಅವರಿಗೆ ನಾಗತಿಬೆಳಗಲು ಗ್ರಾಮದ ಸರ್ವೆ ನಂಬರ್ 104/1, 104/2, 104/3 ಮತ್ತು 104/4 ರಲ್ಲಿ ಒಟ್ಟಾರೆ 6 ಎಕರೆ 26 ಗುಂಟೆ ಜಮೀನು ಇತ್ತು ಮತ್ತು ಒಂದು ಮಂಗಳೂರು ಹಂಚಿನ ಮನೆ ಇತ್ತು. ನನ್ನ ಅಜ್ಜನಿಗೆ ಸೇರಿದ 6 ಎಕರೆ 26 ಗುಂಟೆ ಜಮೀನು ಒಂದೇ ಕಡೆ ಇದೆ ಮತ್ತು ಅದರ ಚಕ್ಕುಬಂಧಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಉಮಾ ಮಹೇಶ್ವರ ಆರಾಧ್ಯ, ಅನ್ನಪೂರ್ಣಮ್ಮ ಮತ್ತು ನಂಜುಡಪ್ಪ ಎನ್ನುವವರ ಜಮೀನು, ಉತ್ತರಕ್ಕೆ ರಸ್ತೆ ಮತ್ತು

ದಕ್ಷಿಣಕ್ಕೆ ಕರಿಯಸಿದ್ದ ಆರಾಧ್ಯ ರವರ ಜಮೀನು ಇದೆ. ಸದರಿ ಚಕ್ಕುಬಂಧಿಗೆ ಒಳಪಟ್ಟು ನನ್ನ ಅಜ್ಜನಿಗೆ 6 ಎಕರೆ 26 ಗುಂಟೆ ಜಮೀನು ಇತ್ತು ಎಂದು ತೋರಿಸಲು ದಾಖಲೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಏನು ಉತ್ತರಿಸದೆ ಸುಮ್ಮನೆ ನಿಲ್ಲುತ್ತಾರೆ. ನನ್ನ ಅಜ್ಜನಿಗೂ ಮೊದಲು ಸದರಿ 6 ಎಕರೆ 26 ಗುಂಟೆ ನನ್ನ ಮುತ್ತಜ್ಜನಿಗೆ ಸೇರಿತ್ತು. ನನ್ನ ಮುತ್ತಜ್ಜನಿಂದ ಸದರಿ ಜಮೀನು ನನ್ನ ಅಜ್ಜನಿಗೆ ಯಾವಾಗ ಬಂತು ಎನ್ನುವುದು ನನಗೆ ಗೊತ್ತಿಲ್ಲ. ಆ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ.

4. ದಾವಾ ಸ್ವತ್ತುಗಳು ನನ್ನ ಅಜ್ಜನಿಗೆ ಭೂ ಸುಧಾರಣ ಕಾಯ್ದೆ ಅಡಿ ಬಂದಿತು ಎಂದು ನಮ್ಮ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಈ ದಾವೆಯ ಬಗ್ಗೆ ನನಗೆ ಏನು ಗೊತ್ತಿಲ್ಲದೆ ಇರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರಕ್ಕೆ ನನ್ನ ತಾಯಿ ಮಾತ್ರ ಸಹಿ ಮಾಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳ ವಿಸ್ತೀರ್ಣ ಮತ್ತು ಚಕ್ಕುಬಂಧಿ ವಿವರವನ್ನು ವಾದ ಪತ್ರದಲ್ಲಿ ನನ್ನ ತಾಯಿ ಹೇಳಿ ಬರೆಸಿರುತ್ತಾರೆ. ಯಾವ ಆಧಾರದಲ್ಲಿ ಸದರಿ ವಿವರ ಬರೆಸಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ತಾಯಿಯ ಖುದ್ದು ಜ್ಞಾನದ ಆಧಾರದಲ್ಲಿ ಬರೆಸಲಾಗಿದೆ ಎನ್ನುತ್ತಾರೆ. ಸರ್ವೆ ನಂಬರ್ 104 ರಲ್ಲಿ ಪೋಡ್ ನಂಬರ್ ಗಳು ನನ್ನ ಅಜ್ಜ ತೀರಿಕೊಂಡ ನಂತರ ಆಗಿದೆ. ಯಾವ ಇಸವಿಯಲ್ಲಿ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚಕ್ಕುಬಂಧಿಗಳ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 104 ಸರ್ವೆಯಾದ ಬಗ್ಗೆ ನನಗೆ

ಗೊತ್ತಿದೆ. ಯಾವಾಗ ಸರ್ವೆ ಆಯಿತು ಎನ್ನುವುದು ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ಉಲ್ಲೇಖಿಸಿರುವ ಚಕ್ಕುಬಂಧಿಗೆ ಒಳಪಟ್ಟು ದಾವಾ ಸ್ವತ್ತುಗಳು ಇದೆ ಎಂದು ನಮ್ಮ ವಾದ ಪತ್ರದಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

5. ದಾವಾ ಸ್ವತ್ತಿನ ಕಂದಾಯ ದಾಖಲೆಗಳು ಪ್ರಸ್ತುತ 2 ನೇ ಪ್ರತಿವಾದಿ ಪರಮೇಶ್ವರಪ್ಪ ಮತ್ತು 3 ನೇ ಪ್ರತಿವಾದಿಯ ಮೃತ ಗಂಡ ನಾಗರಾಜ್ ರವರ ಹೆಸರಿಗೆ ಇದೆ. ಸದರಿಯವರ ಹೆಸರಿಗೆ ಯಾವ ಆಧಾರದಲ್ಲಿ ಪಹಣಿಗಳು ಬದಲಾವಣೆಯಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ನನ್ನ ಅಜ್ಜ ನಂಜುಂಡಪ್ಪ ಬದುಕಿದ್ದಾಗ ಮತ್ತು 1991 ರಲ್ಲೇ ದಾವಾ ಐಟಂ ನಂಬರ್ 1 ರಿಂದ 4 ರ ಸ್ವತ್ತುಗಳು ನನ್ನ ಅಜ್ಜ ಮತ್ತು ಅವರ ಮಕ್ಕಳ ನಡುವೆ ಪಾಲು ವಿಭಾಗ ಆಗಿತ್ತು ಎನ್ನುವುದು ಸುಳ್ಳು. ಸದರಿ ಪಾಲು ವಿಭಾಗದಲ್ಲಿ ನನ್ನ ಅಜ್ಜ ಅವರ ಪಾಲಿಗೆ 2 ಎಕರೆ ಜಮೀನು ಉಳಿಸಿಕೊಂಡು ಇನ್ನೂಳಿದ ತಲಾ 2 ಎಕರೆ 13 ಗುಂಟೆ ಜಮೀನುಗಳನ್ನು ತಮ್ಮ ಮಕ್ಕಳಾದ 2 ನೇ ಪ್ರತಿವಾದಿ ಪರಮೇಶ್ವರಪ್ಪ ಮತ್ತು ಮೃತ ನಾಗರಾಜ್ ರವರಿಗೆ ಕೊಟ್ಟಿದ್ದರು ಎನ್ನುವುದು ಸುಳ್ಳು. ಸದರಿ ಪಾಲು ವಿಭಾಗದ ಪ್ರಕಾರವೇ ದಾವಾ ಸ್ವತ್ತಿನ ಕಂದಾಯ ದಾಖಲೆಗಳು ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ಪಾಲು ವಿಭಾಗ ಆದ ದಿನದಿಂದಲೂ ನನ್ನ ಅಜ್ಜನ ಗಂಡು ಮಕ್ಕಳಾದ 2 ನೇ ಪ್ರತಿವಾದಿ ಮತ್ತು ಮೃತ ನಾಗರಾಜ್ ಒಟ್ಟು ಕುಟುಂಬದಿಂದ ಬೇರೆಯಾಗಿದ್ದರು ಎನ್ನುವುದು ಸುಳ್ಳು.

6. ನನ್ನ ಅಜ್ಜ ಬದುಕಿದ್ದಾಗ ಒಟ್ಟು 6 ಎಕರೆ 26 ಗುಂಟೆ ದಾವಾ ಸ್ವತ್ತಿನಲ್ಲಿ ಭತ್ತ

ಬೆಳೆಯಾಳಾಗುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವ ಇಚ್ಚೆಯಿಂದ ನನ್ನ ಅಜ್ಜ ಬದುಕಿದ್ದಾಗಲೇ 2 ಎಕರೆಯಲ್ಲಿ ಅಡಿಕೆ ತೋಟ ಇತ್ತು ಎನ್ನುತ್ತಾರೆ. 2 ಎಕರೆ ಅಡಿಕೆ ತೋಟ ನನ್ನ ಅಜ್ಜ ಬದುಕಿದ್ದಾಗಲೇ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ.

7. 1991 ರಲ್ಲಿ ತಮ್ಮ ತಂದೆಯ ಜೊತೆ ಆದ ಜುಬಾನಿ ಪಾಲು ವಿಭಾಗದ ನಂತರ 2 ನೇ ಪ್ರತಿವಾದಿ ಮತ್ತು ಅವರ ಸಹೋದರ ನಾಗರಾಜ್ ತಲಾ 2 ಎಕರೆ 13 ಗುಂಟೆ ಜಮೀನನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದರು ಎನ್ನುವುದು ಸುಳ್ಳು. ತಮ್ಮ ಪಾಲಿನ ಜಮೀನುಗಳನ್ನು ಅಭಿವೃದ್ಧಿ ಪಡಿಸಲು ಬ್ಯಾಂಕ್ ಮತ್ತು ಸಂಘಗಳಿಂದ ಸಾಲ ಪಡೆದಿದ್ದರು ಎನ್ನುವುದು ಸುಳ್ಳು. 1991 ರಲ್ಲಿ ಕೇವಲ ಜುಬಾನಿ ಪಾಲು ವಿಭಾಗ ಆಗಿದ್ದರಿಂದ ಮತ್ತು ಪಾಲು ವಿಭಾಗದ ಬಗ್ಗೆ ನೊಂದಾಯಿತ ದಾಖಲೆಗಳು ಇಲ್ಲದ ಕಾರಣ ನನ್ನ ಅಜ್ಜ ತೀರಿಕೊಂಡ ನಂತರ ಅವರಿಬ್ಬರು ಗಂಡು ಮಕ್ಕಳಿಗೆ ತಮ್ಮ ಪಾಲಿಗೆ ಬಂದ ಜಮೀನುಗಳ ಸಂಬಂಧ ವ್ಯವಹಾರ ಮಾಡುವುದು ಕಷ್ಟವಾಗಿದ್ದರಿಂದ ಸದರಿಯವರಿಬ್ಬರು ಸೇರಿ ದಿನಾಂಕ 05.11.2003 ರಲ್ಲಿ ಅವರ ನಡುವೆ ನೊಂದಾಯಿತ ಪಾಲು ವಿಭಾಗ ಪತ್ರ ಮಾಡಿಕೊಂಡರು ಎನ್ನುವುದು ಸುಳ್ಳು. ಸದರಿ ನೊಂದಾಯಿತ ಪಾಲು ವಿಭಾಗದಲ್ಲಿ ಈ ಹಿಂದಿನ ಜುಬಾನಿ ಪಾಲು ವಿಭಾಗದಲ್ಲಿ ನನ್ನ ಅಜ್ಜನಿಗೆ ಕೊಟ್ಟಿದ್ದ 2 ಎಕರೆ ಆಸ್ತಿಯನ್ನು 2 ನೇ ಪ್ರತಿವಾದಿ ಮತ್ತು ಅವರ ಸಹೋದರ ನಾಗರಾಜ್ ತಲಾ ಒಂದೊಂದು ಎಕರೆ ಹಂಚಿಕೊಂಡರು ಮತ್ತು ಹಳೆಯ ಪಾಲು ವಿಭಾಗದಲ್ಲಿ ತಮ್ಮ ಪಾಲಿಗೆ ಬಂದ ತಲಾ 2 ಎಕರೆ

13 ಗುಂಟೆಯನ್ನು ನೊಂದಾಯಿತ ಪಾಲು ವಿಭಾಗದಲ್ಲಿ ತೋರಿಸಿಕೊಂಡಿದ್ದಾರೆ ಎನ್ನುವುದು ಸುಳ್ಳು. 2003 ರಲ್ಲಿ ಆದ ನೊಂದಾಯಿತ ಪಾಲು ವಿಭಾಗದ ಪ್ರಕಾರ ತಮ್ಮ ಪಾಲಿಗೆ ಬಂದ ಸ್ವತ್ತುಗಳನ್ನು 2 ನೇ ಪ್ರತಿವಾದಿ, ಅವರ ಸಹೋದರ ನಾಗರಾಜ್ ಮತ್ತು ಅವರ ವಾರಸುದಾರರುಗಳೇ ಅನುಭವಿಸುತ್ತಿದ್ದಾರೆ ಎಂದರೆ ಸರಿ. ಸದರಿ ನೊಂದಾಯಿತ ಪಾಲು ವಿಭಾಗದ ಪ್ರಕಾರವೇ ದಾವಾ ಸರ್ವೆ ನಂಬರ್ 104 ರಲ್ಲಿ ಪೋಡು ಕಾರ್ಯ ನಡೆದು 1 ರಿಂದ 4 ರ ಪೋಡುಗಳನ್ನು ರಚಿಸಲಾಗಿದೆ ಎಂದರೆ ಸರಿ. ನೊಂದಾಯಿತ ಪಾಲು ವಿಭಾಗ ಆದ ನಂತರ 2 ನೇ ಪ್ರತಿವಾದಿ ಮತ್ತು ಅವರ ಸಹೋದರ ನಾಗರಾಜ್ ಬ್ಯಾಂಕ್ ನಿಂದ ಸಾಲ ಪಡೆದು ತಮ್ಮ ಪಾಲಿಗೆ ಬಂದ ಜಮೀನುಗಳ ಪೈಕಿ ತಲಾ 2 ಎಕರೆ ಜಮೀನಿನಲ್ಲಿ ಅಡಿಕೆ ತೋಟ ಮಾಡಿದ್ದಾರೆ ಎಂದರೆ ಸರಿ.

8. ನನ್ನ ತಂದೆ ಹೊಳಲ್ಕೆರೆ ತಾಲ್ಲೂಕು ಗುಂಡೇರಿ ಗ್ರಾಮದವರು. ನನ್ನ ತಂದೆ-ತಾಯಿಯ ಮದುವೆ 1979-80 ರಲ್ಲಿ ಆಗಿರಬಹುದು. ನನ್ನ ಅಜ್ಜ ಬದುಕಿದ್ದಾಗಲೇ ಅವರ ಎಲ್ಲಾ ಮಕ್ಕಳ ಮದುವೆಯಾಗಿತ್ತು ಎಂದರೆ ಸರಿ. ಮದುವೆಯಾದ ನಂತರ ಎಲ್ಲಾ ಹೆಣ್ಣು ಮಕ್ಕಳು ಅವರವರ ಗಂಡನ ಮನೆಗಳಲ್ಲಿ ಪ್ರತ್ಯೇಕವಾಗಿ ವಾಸ ಮಾಡಲು ಪ್ರಾರಂಭಿಸಿದರು ಎಂದರೆ ಸಾಕ್ಷಿ ನನ್ನ ತಂದೆಗೆ ಯಾವುದೇ ಆಸ್ತಿ ಇಲ್ಲದ ಕಾರಣ ಅವರಿಗೆ ಜಮೀನು ಮತ್ತು ಮನೆ ಕೊಡವುದಾಗಿ ಹೇಳಿ ನನ್ನ ಅಜ್ಜ ಅವರನ್ನು ಮನೆ ಅಳಿಯನಾಗಿ ಮಾಡಿಕೊಂಡಿದ್ದರು ಎನ್ನುತ್ತಾರೆ. ಮದುವೆಯಾದ ನಂತರವೂ ನನ್ನ ತಂದೆ-ತಾಯಿ ನನ್ನ ಅಜ್ಜ ನಂಜುಂಡಪ್ಪನ

ಜೊತೆಯಲ್ಲೇ ವಾಸವಿದ್ದರು. ನನ್ನ ನನ್ನ ತಂದೆ–ತಾಯಿ ಅಜ್ಜನ ಮನೆಯಲ್ಲೇ ಇದಿದ್ದರಿಂದ ನನ್ನ ಅಜ್ಜ ಏನು ವ್ಯವಹಾರ ಮಾಡುತ್ತಿದ್ದರು ಎಂಬ ವಿಷಯ ಅವರಿಗೆ ಗೊತ್ತಾಗುತ್ತಿತ್ತು ಎಂದರೆ ಸರಿ.

9. ಈಗ ನನಗೆ ತೋರಿಸಲಾದ ಫೋಟೋದಲ್ಲಿ ಕಾಣುವ ಮನೆಯಲ್ಲೇ ನನ್ನ ತಂದೆ–ತಾಯಿ ಈಗ ವಾಸವಿದ್ದಾರೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಫೋಟೋವನ್ನು ನಿ.ಡಿ.–1 ಎಂದು ಗುರುತಿಸಲಾಯಿತು. ಸದರಿ ಮನೆ ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿರುವ ನಿವೇಶನದಲ್ಲಿ ಕಟ್ಟಲಾಗಿದೆ ಎಂದರೆ ಸರಿ. ನನ್ನ ಅಜ್ಜ ಬದುಕಿದ್ದಾಗಲೇ ನನ್ನ ತಂದೆ–ತಾಯಿ ಮನೆ ಕಟ್ಟಿಕೊಳ್ಳಲು ದಾವಾ ಷೆಡ್ಯೂಲ್ ಬಿ ನಲ್ಲಿ ಖಾಲಿ ನಿವೇಶನ ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿ ಸ್ವ ಇಚ್ಚೆಯಿಂದ ನಿವೇಶನವನ್ನು ದಾನವಾಗಿ ಕೊಟ್ಟಿದ್ದರು ಎನ್ನುತ್ತಾರೆ. ಈ ಹಿಂದೆ ನಾಗತಿಬೆಳಗಲು ಗ್ರಾಮ ದಾಸರಕಲ್ಲಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಅಜ್ಜ ನನ್ನ ತಂದೆ–ತಾಯಿಗೆ ಕೊಟ್ಟ ನಿವೇಶನದ ಖಾತೆ ದಾಸಕಲ್ಲಹಳ್ಳಿ ಪಂಚಾಯತಿಯಲ್ಲಿ ನನ್ನ ತಾಯಿಯ ಹೆಸರಿಗೆ ಆಗಿತ್ತು ಎಂದರೆ ಸರಿ. ಈಗ ನನಗೆ ತೋರಿಸಲಾದ ದಾಖಲೆಯೇ ಸದರಿ ಖಾತೆ ದಾಖಲೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು **ನಿಡಿ–2** ಎಂದು ಗುರುತಿಸಲಾಯಿತು. ಪ್ರಸ್ತುತ ನಾಗತಿಬೆಳಗಲು ಗ್ರಾಮದಲ್ಲೇ ಪಂಚಾಯತಿಯಾಗಿದ್ದು ನಿಡಿ–1 ರ ಫೋಟೋದಲ್ಲಿ ಕಾಣುವ ಮನೆಯ ಖಾತೆ ಸದರಿ ಗ್ರಾಮ ಪಂಚಾಯತಿಯಲ್ಲಿ ನನ್ನ ತಾಯಿಯ ಹೆಸರಿಗೆ ಇದೆ ಎಂದರೆ ಸರಿ.

10. ನನ್ನ ಅಜ್ಜ ಬದುಕಿದ್ದಾಗ ಅವರು ವಾಸವಿದ್ದ ಮನೆಯ ಸಮಅರ್ಧ ಭಾಗದಲ್ಲಿ ಈಗ 2 ನೇ ಪ್ರತಿವಾದಿ ಮತ್ತು ಇನ್ನೊಳಿದ ಅರ್ಧ ಭಾಗದಲ್ಲಿ ಅವರ ಸಹೋದರ ನಾಗರಾಜ್ ರವರ ವಾರಸುದಾರರಾದ 3 ಮತ್ತು 4 ನೇ ಪ್ರತಿವಾದಿಯರು ವಾಸವಿದ್ದಾರೆ ಎಂದರೆ ಸರಿ. ನನ್ನ ಅಜ್ಜ ನವರೇ ಆ ರೀತಿ ಮನೆಯನ್ನು ಪಾಲು ವಿಭಾಗಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಮನೆಗಳ ಪ್ರತ್ಯೇಕ ಖಾತೆಗಳು ಈಗ 2 ನೇ ಪ್ರತಿವಾದಿ ಮತ್ತು ಮೃತ ನಾಗರಾಜ್ ರವರ ಹೆಸರಿಗೆ ಇದೆ ಎಂದರೆ ಸರಿ.

11. ಮೇಲೆ ಹೇಳಲಾದಂತೆ ನನ್ನ ಅಜ್ಜ ಬದುಕಿದ್ದಾಗಲೇ ಅವರಿಗೆ ಸೇರಿದ ಎಲ್ಲಾ ಜಮೀನುಗಳು ಮತ್ತು ಮನೆಯನ್ನು ಪಾಲು ವಿಭಾಗ ಮಾಡಿಕೊಟ್ಟಿದ್ದರೂ ಮತ್ತು ಸದರಿ ವಿಷಯ ಗೊತ್ತಿದ್ದರೂ ಅದನ್ನು ಮುಚ್ಚಿಟ್ಟು ನ್ಯಾಯಾಲಯಕ್ಕೆ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ 2 ರಿಂದ 5 ನೇ ಪ್ರತಿವಾದಿಯರ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**